ಎಲ್ಲ ಬೇಡಿಕೆಗಳನ್ನು ಪೂರೈಸಿದಂತಾಗುತ್ತಿತ್ತು. ಆಕೆಗೆ ಬೆಳಿಗ್ಗೆ ತಡವಾಗಿ ಏಳುವುದೆಂದರೆ, ಮನೆಗೆ ಏನೋ ಇದಿಗಾಲ ಬಂದಿದೆ ಎಂದೇ ಭಾವಿಸುತ್ತಿದ್ದಳು. ಗಂಡಸರೂ ಬೇಗ ಏಳಬೇಕು, ತಮ್ಮ ತಮ್ಮ ಕೆಲಸ ಕಾರ್ಯಗಳಿಗೆ ತಯಾರಾಗಿ ಹೋಗಬೇಕೆನ್ನುವುದು ಆಕೆಯ ದಿನ ನಿತ್ಯದ ಹಂಬಲವಾಗಿತ್ತು. ತಡವಾಗಿ ಏಳುವವರ ಮುಖವನ್ನೂ ಕೂಡ ಆಕೆ ನೋಡುತ್ತಿರಲಿಲ್ಲ. ತಾನು ಮಾಡಬೇಕಾದ ಬೆಳಗಿನ ಎಲ್ಲ ಕಾರ್ಯಗಳನ್ನು ಮುಗಿಸಿ, ಹನ್ನೊಂದು ಗಂಟೆ ಎಂದರೆ ಅದೇ ಊರಲ್ಲಿದ್ದ ಇಬ್ಬರು ತಂಗಿಯಂದಿರ ಮನೆಗೆ ಹೋಗುತ್ತಿದ್ದಳು. ಅಲ್ಲಿ ಅವರ ಕೆಲಸ ಕಾರ್ಯಗಳಲ್ಲಿ ಕೈ ಜೋಡಿಸುತ್ತಿದ್ದಳು. ಒಬ್ಬಳು ದೈಹಿಕವಾಗಿ ಅಶಕ್ತಳಾಗಿದ್ದರಿಂದ ಹೆಚ್ಚಿನ ಸಮಯವನ್ನು ಆಕೆಯ ಜೊತೆಯೇ ಕಳೆಯುತ್ತಿದ್ದಳು. ಆಕೆಗೆ ಸ್ನಾನ ಮಾಡಿಸಿ, ಮಡಿ ಬಟ್ಟೆ ಉಡಿಸಿ, ಅಡಿಗೆ ಮನೆಗೆ ಹೋಗಿ ಆಕೆಗಾಗಿ ಏನಾದರು ಬಿಸಿಯದನ್ನು ಮಾಡಿ ತಿನ್ನಲು ಕೊಡುತ್ತಿದ್ದಳು. ಇದು ಒಂದು ಹಂತದ ಕೆಲಸವಾದರೆ, ಆ ಅಶಕ್ತ ತಂಗಿಯ ಸಾಮೀಪ್ಯದಲ್ಲಿ ಒಂದೆರಡು ತಾಸು ಕುಳಿತು, ಆಕೆಯ ಬದುಕಿನ ಭರವಸೆಗಳು, ಬದುಕಿನ ಭಾವನೆಗಳು ಕಮರದಂತೆ, ಮೆಲು ಮಾತಿನ ಸಂಭಾಷಣೆಯಲ್ಲಿ ತೊಡಗಿ, ನಿರೀಕ್ಷೆಗಳು ಗರಿಗೆದರುವಂತೆ ಮಾಡುತ್ತಿದ್ದಳು.

ಆಕೆ ಎಷ್ಟೆಲ್ಲ ಜನರ ಸ್ನೇಹ ಸೇತುವೆಯಾಗಿದ್ದಳು! ಬಹುದಿನದ ಗೆಳತಿಗೆ ಈ ಬಾರಿಯ ಯುಗಾದಿಯನ್ನು ಆಕೆಯ ಮನೆಯಲ್ಲಿ ಆಚರಿಸಲು ಬರುವುದಾಗಿ ತಿಳಿಸಿದ್ದಳು. ಹೆರಿಗೆಯಾದ ಸ್ನೇಹಿತೆಯ ಮಗಳ ಮನೆಗೆ ಹೋಗಿ ಬೆಲ್ಲದ ಕೊಬ್ಬರಿ ಕೊಟ್ಟು ಬಂದಳು. ಆರೈಕೆಯಲ್ಲಿರುವ ಸಂಬಂಧಿಯೊಬ್ಬಳಿಗೆ ಔಷಧ ಉಪಚಾರ ಮಾಡುವುದು ನಿಯಮಿತ ಕಾರ್ಯವಾಗಿತ್ತು. ಬೆಳೆಯುವ ಮಕ್ಕಳಿಗೆ ಆಟದ ಸಲಕರಣೆ ಕೊಡಿಸಲು ಎಂದೂ ಮರೆಯುತ್ತಿರಲಿಲ್ಲ. ಇದಕ್ಕೆಲ್ಲ ದುಡ್ಡು ಹೇಗೆ ಹೊಂದಿಸುತ್ತಿದ್ದಳೋ ಗೊತ್ತಿಲ್ಲ! ಮನಸ್ಸು ದೊಡ್ಡದಾಗಿದ್ದರೆ, ಕಡಿಮೆ ದುಡ್ಡಿನಲ್ಲಿಯೂ ಕೂಡ ಎಲ್ಲವನ್ನೂ ಮಾಡಬಹುದು ಎನ್ನುವುದನ್ನು ಮಾಡಿಯೇ ತೋರಿಸುತ್ತಿದ್ದಳು. ಆಕೆಯ ಸಮಯಪ್ರಜ್ಞೆ ಮೆಚ್ಚುವಂತಿತ್ತು. ವೇಳೆಗೆ ಒದಗುವುದು ಅದೊಂದು ಮಹಾ ಗುಣವೆನ್ನುವುದಾದರೆ ಆಕೆಯು, ಆಯಾ ವೇಳೆಗೆ ಎಲ್ಲೆಲ್ಲಿ ಇರಬೇಕೋ ಅಲ್ಲಿಯೇ ಇರುತ್ತಿದ್ದಳು. ಇದು ನಂಬಿದ ದೇವರಿಗೂ ಆಗದ ಕೆಲಸ. ತುಂಬಿದ ಕೆರೆ, ಸರೋವರದ ಸಡಗರ ನೋಡಿದ್ದೀರಾ! ಅವುಗಳ ದುಂಡಗಿನ ಮುಖಗಳಲ್ಲಿ ನೆಮ್ಮದಿಯ ನೋಟ ಕಂಡಿದ್ದೀರಾ! ಅವುಗಳ ಮೇಲಿನ ತೆರೆಗಳು ಪಿಯಾನೋದ ಮೇಲೆ ಬೆರಳಾಡಿಸಿದಂತಿರುತ್ತವೆ. ಅವುಗಳ ಮೇಲೆ ಸುಳಿವ ಸುಳಿಗಾಳಿ ಮೆಲ್ಲಗೇ ಸ್ಪರ್ಶಿಸಿ ಬೆಳ್ಳಿಯ ಪುಳಕವೇರಿಸಿ ಮುಂದೆ ಮುಂದೆ ಸರಿಯುತ್ತದೆ. ಅವುಗಳ ಮೇಲೆ ಕುಣಿವ ಸೂರ್ಯ ಕಿರಣಗಳು ನೀರಿಗೆ ಕನ್ನಡಿಯ ಸಹಸ್ರ ಕಣ್ಣುಗಳ ಆಭರಣ ಕಟ್ಟಿದಂತಿರುತ್ತದೆ. ಅಲ್ಲಿ ಸೃಷ್ಟಿಯ ಸಮಸ್ತ ಲೀಲೆ ನಡೆದಿರುತ್ತದೆ. ಅದು ಒಬ್ಬೊಬ್ಬರಿಗೆ ಒಂದೊಂದು ರೀತಿಯ ಸಂತೋಷ ಕೊಡುತ್ತದೆ. ತಂಗಿ ಹಾಗೆಯೇ ಇದ್ದಳು.

ಸುಮ್ಮವ್ವಕ್ಕನನ್ನು ಕೇಳಿದರೆ "ತಂಗಿ ಬಂದು ಹೋದಳು ಎಲ್ಲವೂ ಸರಿಯಾಯ್ತು," ಎನ್ನುತ್ತಾಳೆ. ಭರಮಜ್ಜಿ "ಮಗಳು ಬಂದಿದ್ದಳು ಎಲ್ಲ ಸರಿ ಮಾಡಿದಳು," ಎನ್ನುತ್ತಾಳೆ. ಹನುಮವ್ವಕ್ಕ "ಅಕಿ ಬಂದ್ರ ಯಾವುದೂ ನಿಲ್ಲುವುದಿಲ್ಲ," ಅನ್ನುತ್ತಾಳೆ. ಬಸಪ್ಪಜ್ಜ "ಗಂಡ ಮಕ್ಕಳಿಗೆ ಹೇಳಿ ಹೇಳಿ ಸಾಕಾಯ್ತು, ಕೊನೆಗೆ ಮಗಳು ಬಂದು ಪೂರೈಸಿದಳು," ಅನ್ನುತ್ತಾನೆ. ತೇಲುವ ಮೋಡ, ಬೀಸುವ ಗಾಳಿ, ಹರಿವ ನೀರು ಎಲ್ಲವೂ ಆಕೆಯ ಕತೆ ಹೊತ್ತು ಸಾಗುತ್ತಿದ್ದವು. ಸರ್ವವ್ಯಾಪಿ, ಸರ್ವ ಉಪಯೋಗಿ ಜೀವಿಯಾಗಿದ್ದಳು.